ಓ.ಎಸ್. ನಂಃ 221/2016
ಪಿ.ಡಬ್ಲ್ಯೂ-1 (ಅಮರ)

ದಿನಾಂಕ: 23-03-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀಸವಾಲುಃ ಶ್ರೀ.ಬಿ.ಎಚ್.ಎನ್. ಪ್ರತಿವಾದಿ 4 ರಿಂದ 6 ರವರ ಪರ ವಕೀಲರಿಂದಃ**

ನಾನು ಎಂ.ಸಿ.ಎ. ಪದವಿದರನಿರುತ್ತೇನೆ. ನನ್ನ ವಿದ್ಯಾಭ್ಯಾಸವನ್ನು ಬೆಂಗಳೂರಿನಲ್ಲಿ 2010ರಲ್ಲಿ ಮುಗಿಸಿರುತ್ತೇನೆ. ನನ್ನ ವಿದ್ಯಾಭ್ಯಾಸದ ಖರ್ಚನ್ನು ನನ್ನ ತಂದೆಯವರೇ ನೋಡಿಕೊಂಡಿರುತ್ತಾರೆ ಎಂದರೆ ಸರಿ. ನನ್ನ ಅಜ್ಜನ ಹೆಸರು ಭೀಮಪ್ಪ ಮಾವಿನಗಿಡದ. ನಾನು 1 ಅಥವಾ 2ನೇ ತರಗತಿಯಲ್ಲಿ ಇದ್ದಾಗ ನನ್ನ ಅಜ್ಜ ಭೀಮಪ್ಪ ತೀರಿಕೊಂಡಿರುತ್ತಾರೆ. ನನ್ನ ಅಜ್ಜನಿಗೆ 04 ಜನ ಮಕ್ಕಳು ಎಂದರೆ ಸರಿ. ಅವರುಗಳು ಸತ್ತೆಪ್ಪ, ರಾಮಪ್ಪ, ಭೀರಪ್ಪ, ಫಕೀರಪ್ಪ. ಸದರಿಯವರನ್ನು ಈ ದಾವೆಯಲ್ಲಿ ಸೇರಿಸಿಲ್ಲ ಎಂದರೆ ಸರಿ.

2. ಸರ್ವೆ ನಂ.99 ಮತ್ತು 100 ನನ್ನ ಅಜ್ಜನಿಗೆ ಸರಕಾರದಿಂದ ಮಂಜೂರಾದ ಜಮೀನುಗಳು ಎಂದರೆ ನನಗೆ ಗೊತ್ತಿಲ್ಲ. ಡೈರಿ ನಂ.1405ರ ಪ್ರಕಾರ ಸದರಿ ಜಮೀನಿನಲ್ಲಿ ನನ್ನ ತಂದೆ ಹಾಗೂ ಅವರ ಅಣ್ಣ ತಮ್ಮಂದಿಯರ ನಡುವೆ ವಾಟ್ನಿ ಆಗಿದೆ ಎಂದರೆ ಸರಿ. ಸರ್ವೆ ನಂ.100/2/2 ರಲ್ಲಿ 03ಎ-12ಗು, ಸರ್ವೆ ನಂ.99/2/2 ರಲ್ಲಿ 03ಎ-02ಗು ಜಮೀನು ನಮ್ಮ ತಂದೆಯ ಪಾಲಿಗೆ ಬಂದಿರುತ್ತದೆ ಎಂದರೆ ಸರಿ. ಅದೇ ರೀತಿ ನನ್ನ ತಂದೆಯ ಅಣ್ಣ ಸತ್ತೆಪ್ಪ ಇವರಿಗು ಸಹ ಸರ್ವೆ ನಂ.100/2/1 ರಲ್ಲಿ 03ಎ-12ಗು, ಸರ್ವೆ ನಂ.99/2/2 ರಲ್ಲಿ 03ಎ-02ಗು ಜಮೀನು ಬಂದಿರುತ್ತದೆ ಎಂದರೆ ಸರಿ. ಅದೇ ರೀತಿ ನನ್ನ ಚಿಕ್ಕಪ್ಪ ಬೀರಪ್ಪ

ಇವರಿಗೆ ಸರ್ವೆ ನಂ.100/2/3 ರಲ್ಲಿ 03ಎ-12ಗು, ಸರ್ವೆ ನಂ.99/2/3 ರಲ್ಲಿ 03ಎ-02ಗು ಜಮೀನು ಬಂದಿರುತ್ತದೆ ಎಂದರೆ ಸರಿ. ಅದೇ ರೀತಿ ನನ್ನ ಚಿಕ್ಕಪ್ಪ ಫಕೀರಪ್ಪ ಇವರಿಗೆ ಸರ್ವೆ ನಂ.100/2/4 ರಲ್ಲಿ 03ಎಕರೆ ಮತ್ತು ಸರ್ವೆ ನಂ.99/2/4 ರಲ್ಲಿ 03ಎಕರೆ ಜಮೀನು ಬಂದಿರುತ್ತದೆ ಎಂದರೆ ಸರಿ. ಸದರಿ ವಾಟ್ನಿಯನ್ನು ನಾನು ನನ್ನ ತಂದೆ ಇಲ್ಲೀಯವರೆಗು ಪ್ರಶ್ನಿಸಿಲ್ಲ ಎಂದರೆ ಸಾಕ್ಷಿದಾರರು ತಾವು ಪ್ರಶ್ನಿಸಿಲ್ಲ, ತಮ್ಮ ತಂದೆ ಪ್ರಶ್ನಿಸಿದ್ದಾರೋ ಇಲ್ಲವೊ ತಮಗೆ ಗೊತ್ತಿಲ್ಲ ಎಂದು ಹೇಳುತ್ತಾರೆ.

3. ನಾನು ನಮ್ಮ ವಕೀಲರಿಗೆ ದಾವಾ ಆಸ್ತಿಗಳ ಉತಾರ ಮತ್ತು ಡೈರಿಗಳನ್ನು ಕೊಟ್ಟಿರುತ್ತೇನೆ. ಡೈರಿಗಳಲ್ಲಿ ಏನು ಹೇಳಲಾಗಿದೆ ಎಂದು ನಾನು ನೋಡಿಲ್ಲ. ನಮ್ಮ ತಂದೆಯ ಪಾಲಿಗೆ ಬಂದ ಸರ್ವೆ ನಂ.99/2/2 ಈ ದಾವೆಯಲ್ಲಿ ಸೇರಿಸಿಲ್ಲ ಎಂದರೆ ಸರಿ. ನಮ್ಮ ತಂದೆಯ ಹೆಸರಿನಲ್ಲಿ ಕಳ್ಳಿಗುದ್ದಿ ಗ್ರಾಮದಲ್ಲಿಯ ಸರ್ವೆ ನಂ.121/1+2+3+4/ಎಡಿ ಯಲ್ಲಿ 02ಎ-10ಗು ಜಮೀನು ಇದ್ದು ಅದನ್ನು ಈ ದಾವೆಯಲ್ಲಿ ಸೇರಿಸಿಲ್ಲ ಎಂದರೆ ಸರಿ. ಸರ್ವೆ ನಂ.99/2/2 ಮತ್ತು ಸರ್ವೆ ನಂ.121/1+2+3+4/ಎಡಿ ಈ ದಾವೆಯಲ್ಲಿ ಉದ್ದೇಶಪೂರ್ವಕವಾಗಿ ಸೇರಿಸಿಲ್ಲ ಎಂದರೆ ಸರಿಯಲ್ಲ. ಸರ್ವೆ ನಂ.99/2/2 ಈ ಜಮೀನು ನನ್ನ ತಂದೆಯ ಹೆಸರಿನಲ್ಲಿ ಇದೆ ಎನ್ನುವ ವಿಷಯ ನನಗೆ ಗೊತ್ತಿದೆ ಆದರ ಸರ್ವೆ ನಂ.121/1+2+3+4/ಎಡಿ ಜಮೀನು ನನ್ನ ತಂದೆಯ ಹೆಸರಿನಲ್ಲಿ ಇದ್ದ ಬಗ್ಗೆ ನನಗೆ ಮಾಹಿತಿ ಇಲ್ಲ. ಸದರಿ ಜಮೀನುಗಳನ್ನು ಈ ದಾವೆಯಲ್ಲಿ ಸೇರಿಸಲು ನನಗೆ ಯಾವುದೇ ತೊಂದರೆ ಇರುವುದಿಲ್ಲ.

4. ಗೋಕಾಕನಲ್ಲಿ ನಮ್ಮ ತಂದೆಯ ಹೆಸರಿನಲ್ಲಿ ಇದ್ದ ಕಟ್ಟಡವನ್ನು ಈ ದಾವೆಯಲ್ಲಿ ಸೇರಿಸಿಲ್ಲ ಎಂದರೆ ಸರಿ. 3ನೇ ಪ್ರತಿವಾದಿ ಬಿ.ಎ ಪದವಿದರ ಇರುತ್ತಾರೆ. 3ನೇ ಪ್ರತಿವಾದಿ 2007 ರಲ್ಲಿ ತಮ್ಮ ಪದವಿ ಮುಗಿಸಿರುತ್ತಾರೆ. ನನ್ನ ತಂದೆ ನ್ಯೂ ಇಂಗ್ಲೀಷ ಶಾಲೆ ಗೋಕಾಕನಲ್ಲಿ ಶಿಕ್ಷಕರಿದ್ದರು. ನಮ್ಮ ತಂದೆಗೆ ಎಷ್ಟು ಸಂಬಳ ಬರುತ್ತಿತ್ತು ಎಂದು ನನಗೆ ನಿಖರವಾಗಿ ಗೊತ್ತಿಲ್ಲ ಆದರೆ ಅವರಿಗೆ ರೂ.80,000/- ಗಿಂತ ಹೆಚ್ಚಿಗೆ ಸಂಬಳ ಬರುತ್ತಿತ್ತು. ನಮ್ಮ ತಂದೆಗೆ ತಿಂಗಳಿಗೆ ರೂ.80,000/- ಯಾವ ಸಾಲಿನಲ್ಲಿ ಬರುತ್ತಿತ್ತು ಎಂದು ತೋರಿಸಲು ದಾಖಲೆಗಳನ್ನು ಹಾಜರ ಮಾಡಿಲ್ಲ.

5. ಗೋಕಾಕನಲ್ಲಿ 2003 ರಲ್ಲಿ ಒಂದು ಖುಲ್ಲಾ ನಿವೇಶವನ್ನು ನಮ್ಮ ತಂದೆ ಖರೀದಿ ಮಾಡಿರುತ್ತಾರೆ. ಸದರಿ ನಿವೇಶನ ಖರೀದಿ ಮಾಡಿ 02 ವರ್ಷದಲ್ಲಿ ಆ ನಿವೇಶನದಲ್ಲಿ ಕಟ್ಟಡ ಕಟ್ಟಿರುತ್ತಾರೆ. ಸದರಿ ಕಟ್ಟಡ ಕಟ್ಟಲು ಎಷ್ಟು ದುಡ್ಡು ಖರ್ಚು ಆಗಿದೆ ಎಂದು ಪ್ರಶ್ನಿಸಿದರೆ ಸಾಕ್ಷಿದಾರರು ರೂ.6,00,000/- ದಿಂದ ರೂ.8,00,000/- ದಷ್ಟು ಖರ್ಚು ಆಗಿದೆ ಎಂದು ಹೇಳುತ್ತಾರೆ. ಖುಲ್ಲಾ ಜಾಗಾಕ್ಕೆ ರೂ.7,00,000/- ದಿಂದ ರೂ.8,00,000/- ಬೆಲೆ ಬಾಳುತ್ತಿತ್ತು ಎಂದರೆ ಸರಿಯಲ್ಲ.

6. ನಮ್ಮ ತಂದೆಗೆ ಖುಲ್ಲಾ ಜಾಗಾ ಮತ್ತು ಕಟ್ಟಡ ಖರೀದಿ ಮಾಡುವಷ್ಟು ಆರ್ಥಿಕ ಶಕ್ತಿ ಇರಲಿಲ್ಲ ಎಂದರೆ ಸರಿಯಲ್ಲ. ನನ್ನ ತಂದೆ ಸಾಲ ಮಾಡಿ ಖುಲ್ಲಾ ಜಾಗಾ ಖರೀದಿ ಮಾಡಿದ್ದಾರೆ ಎಂದರೆ ಸರಿಯಲ್ಲ. ನಮ್ಮ ತಂದೆ ಅವರ

ಸಂಬಳದಲ್ಲಿ ಹಣ ಉಳಿತಾಯ ಮಾಡಿ ನಿವೇಶನ ಖರೀದಿ ಮಾಡಿದ್ದರು. ನಮ್ಮ ತಂದೆ ಅವರ ಸಂಬಳದಲ್ಲಿ ಹಣ ಉಳಿತಾಯ ಮಾಡಿ ನಿವೇಶನ ಖರೀದಿ ಮಾಡಿದ್ದರು ಎಂದು ತೋರಿಸಲು ನಾನು ದಾಖಲೆಗಳನ್ನು ಹಾಜರ ಮಾಡಿಲ್ಲ ಹಾಗೂ ನನ್ನ ವಾದ ಪತ್ರದಲ್ಲಿ ಮತ್ತು ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿಯು ಸಹ ಹೇಳಿಲ್ಲ ಎಂದರೆ ಸರಿ.

7. ಹೋದ ದಿನಾಂಕದಂದು ನಾನು ಮತ್ತು ನನ್ನ ತಂದೆ ಸೇರಿ ನ್ಯಾಯಾಲಯಕ್ಕೆ ಬಂದಿದ್ದೆವು ಎಂದರೆ ಸರಿಯಲ್ಲ. ನಾನು ಮತ್ತು ನನ್ನ ತಂದೆ ಇಬ್ಬರು ಕೂಡಿಯೇ ಇದ್ದರೂ ಸಹ ಏನಾದರು ಮಾಡಿ ದಾವಾ ಆಸ್ತಿಗಳಲ್ಲಿ ಪಾಲು ಮಾಡಿಕೊಳ್ಳಬೇಕು ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

8. ನನ್ನ ತಂದೆಗೆ ಹಣದ ಅವಶ್ಯಕತೆ ಇದ್ದುದ್ದರಿಂದ ಸರ್ವೆ ನಂ.100/2/2 ರ ಜಮೀನನ್ನು ಮಾರಾಟಕ್ಕೆ ತೆಗೆದಿದ್ದರು ಎಂದರೆ ಸರಿಯಲ್ಲ. ನನ್ನ ತಂದೆಗೆ ಹಣದ ಅವಶ್ಯಕತೆ ಇದ್ದುದ್ದರಿಂದ ದಿನಾಂಕ 27/03/2014 ರಂದು ರೂ.6,92,000/-ಕ್ಕೆ ಸರ್ವೆ ನಂ.100/2/2 ರ ಜಮೀನನ್ನು ಪ್ರತಿವಾದಿ 4 ಮತ್ತು 5 ರವರಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಸರಿಯಲ್ಲ. ನಮ್ಮ ಕುಟುಂಬದ ನಿರ್ವಹಣೆಯನ್ನು ನಮ್ಮ ತಂದೆ ಮಾಡುತ್ತಾರೆ ಎಂದರೆ ಸರಿಯಲ್ಲ. ನನ್ನ ಹಾಗೂ ನನ್ನ ತಂದೆಯ ಪಡಿತರ ಚೀಟಿಗಳು ಒಂದೇ ಮನೆಯ ವಿಳಾಸದ್ದು ಇವೆ ಎಂದರೆ ಮೊದಲು  ಇದ್ದವು ಈಗ ಬದಲಾವಣೆ ಮಾಡಿಕೊಂಡಿದ್ದಾಗಿ ಹೇಳುತ್ತಾರೆ.

ಮುಂದುವರೆದು ಬದಲಾವಣೆ ಇನ್ನು ಮಾಡಿಕೊಂಡಿಲ್ಲ ಮಾಡಿಕೊಳ್ಳಬೇಕು ಎಂದು ಹೇಳುತ್ತಾರೆ.

9. ಪ್ರತಿವಾದಿ 4 ಮತ್ತು 5 ಖರೀದಿ ಮಾಡಿದ ಜಮೀನಿನಲ್ಲಿ ಪ್ರತಿವಾದಿ 4 ರಿಂದ 6 ರವರು ತಮ್ಮ ತಮ್ಮಲ್ಲಿ ಹಕ್ಕು ಬಿಟ್ಟುಕೊಂಡು ಸದರಿ ಜಮೀನನ್ನು ಹಂಚಿಕೊಂಡಿದ್ದಾರೆ ಎಂದರೆ ಸರಿಯಲ್ಲ. ಖರೀದಿ ಪತ್ರ ಬರೆದುಕೊಟ್ಟ ನಂತರ ಉತಾರದಲ್ಲಿ ಸರ್ವೆ ನಂ.100/2/2 ಕ್ಷೇತ್ರ 01ಎ-26ಗು, ಸರ್ವೆ ನಂ.100/2/5 ಕ್ಷೇತ್ರ 01ಎ-26ಗು ಎಂದು ನಮೂದು ಇದೆ ಎಂದರೆ ಸರಿ. ಹಕ್ಕು ಬಿಟ್ಟು ಕೊಟ್ಟ ಪತ್ರದ ಆಧಾರದ ಮೇಲೆ ಎಂ.ಆರ್.ನಂ.35/2015-16 ಮಂಜೂರಾಗಿದೆ ಎಂದರೆ ನನಗೆ ಗೊತ್ತಿಲ್ಲ. ಎಂ.ಆರ್.ನಂ.35/2015-16 ಮತ್ತು ಪ್ರತಿವಾದಿ 4 ಮತ್ತು 5 ಸರ್ವೆ ನಂ.100/2/2 ರಲ್ಲಿಯ ಜಮೀನು ಖರೀದಿ ಮಾಡಿದ ನಂತರ ಆದ ಡೈರಿಯನ್ನು ನಾವು ಈ ಹೊತ್ತಿನವರೆಗು ಪ್ರಶ್ನೆ ಮಾಡಿಲ್ಲ ಎಂದರೆ ಸರಿ.

10. ಪ್ರತಿವಾದಿ 4 ಮತ್ತು 5 ರವರು ಜಮೀನು ಖರೀದಿ ಮಾಡಿದ ನಂತರ ಹಕ್ಕು ಬಿಡುಗಡೆ ಆದ ಮೇಲೆ ಸದರಿ ಜಮೀನಿನಲ್ಲಿ ಒಂದು ಕೊಳವೆ ಬಾಂವಿ ಹಾಕಿ ವ್ಯವಸಾಯ ಮಾಡುತ್ತಿದ್ದಾರೆ ಎಂದರೆ ಸರಿಯಲ್ಲ. ಸದರಿ ಕೊಳವೆ ಬಾಂವಿಗೆ ವಿದ್ಯುತ ಸಂಪರ್ಕ ಸಹ ಪಡೆಯಲಾಗಿದೆ ಎಂದರೆ ನನಗೆ ಗೊತ್ತಿಲ್ಲ.

11. ದಾವಾ ಆಸ್ತಿಗಳಲ್ಲಿ ನಾವೇ ಕಬ್ಜೆಯಲ್ಲಿ ಇದ್ದೇವೆ ಎಂದು ತೋರಿಸಲು ದಾಖಲೆಗಳನ್ನು ಹಾಜರ ಮಾಡಿಲ್ಲ. ದಾವಾ ಆಸ್ತಿಗಳಲ್ಲಿ ನಾವು ಕಬ್ಜೆಯಲ್ಲಿ

ಇದ್ದೇವೆ ಎಂದು ತೋರಿಸಲು ನನ್ನ ಹೇಳಿಕೆಯನ್ನು ಹೊರತುಪಡಿಸಿ ದಾಖಲೆ ಇರುವುದಿಲ್ಲ. ಪ್ರತಿವಾದಿ 4 ಮತ್ತು 5 ರವರು ಸರ್ವೆ ನಂ.100/2/2 ನ್ನು ಸಾಕಷ್ಟು ದುಡ್ಡು ಖರ್ಚು ಮಾಡಿ ಅಭಿವೃದ್ಧಿ ಪಡಿಸಿದ್ದಾರೆ ಎಂದರೆ ಸರಿಯಲ್ಲ. ತಮ್ಮ ಜಮೀನಿನ ಆಧಾರದ ಮೇಲೆ ಪ್ರತಿವಾದಿ 4 ಮತ್ತು 5 ರವರು ಬ್ಯಾಂಕನಲ್ಲಿ ಸಾಲ ಸಹ ಮಾಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ.

12. ನಮ್ಮ ತಂದೆ ಅವರು ಮಾಡಿದ ಸಾಲ ತೀರಿಸಲು ಜಮೀನುಗಳನ್ನು ಮಾರಾಟ ಮಾಡಿದ್ದರೂ ಸಹ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಮ್ಮ ತಂದೆ ಕೆಲವು ದುಶ್ಚಟಗಳನ್ನು ಮಾಡುತ್ತಿದ್ದರು ಆದ್ದರಿಂದ ಕೆಲವು ದಾಖಲೆಗಳನ್ನು ಬರೆದಿರುತ್ತಾರೆ. ನನ್ನ ತಂದೆಗೆ ಏನೇನು ದುಶ್ಚಟಗಳು ಇದ್ದವು ಎಂದು ನನ್ನ ವಾದ ಪತ್ರದಲ್ಲಿ ಮತ್ತು ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ಬರೆಯಿಸಿಲ್ಲ. ನಮ್ಮ ತಂದೆ ದುಶ್ಚಟಗಳನ್ನು ಮಾಡುತ್ತಿದ್ದರು ಎಂದು ಹೇಳಿ ನನ್ನ ತಾಯಿ ನನ್ನ ತಂದೆಯ ವಿರುದ್ಧ ಪೊಲೀಸ ಠಾಣೆಯಲ್ಲಿ ಯಾವುದೇ ದೂರು ಕೊಟ್ಟಿಲ್ಲ. ನಮ್ಮ ತಂದೆ ತಾಯಿ ಜೊತೆ ಜಗಳ ಮಾಡುತ್ತಿದ್ದರು ಎಂದು ಹೇಳಿ ಫಿರ್ಯಾದಿ ಕೊಡಲು ಯಾವುದೇ ತೊಂದರೆ ಇರಲಿಲ್ಲ.

13. ನಮ್ಮ ತಂದೆ ಕುಟುಂಬದ ಅವಶ್ಯಕತೆಗಾಗಿ ದಾವಾ ಆಸ್ತಿಯನ್ನು ಮಾರಾಟ ಮಾಡಿದ್ದರೂ ಸಹ ನಾನು, ನನ್ನ ತಂದೆ, ತಾಯಿ ಸೇರಿಕೊಂಡು ಈ ಸುಳ್ಳು ದಾವೆ ಮಾಡಿದ್ದೇವೆ ಎಂದರೆ ಸರಿಯಲ್ಲ. ಏನಾದರೂ ಮಾಡಿ ಪ್ರತಿವಾದಿ 4 ರಿಂದ 6 ರವರು ಖರೀದಿ ಮಾಡಿದ ಆಸ್ತಿಯಲ್ಲಿ ಪಾಲು ಪಡೆಯಬೇಕೆಂದು ಹೇಳಿ

ಈ ಸುಳ್ಳು ದಾವೆ ಮಾಡಿದ್ದೇವೆ ಎಂದರೆ ಸರಿಯಲ್ಲ. ನಿಪಿ-5 ರಲ್ಲಿ ಸರ್ವೆ ನಂ.99/2/2 ಸಹ ನಮ್ಮ ಕುಟುಂಬಕ್ಕೆ ಸೇರಿದ್ದು ಎಂದು ಹೇಳಿದ್ದರೂ ಸಹ ಉದ್ದೇಶಪೂರ್ವಕವಾಗಿ ಸರ್ವೆ ನಂ.99/2/2 ರ ಜಮೀನನ್ನು ಈ ದಾವೆಯಲ್ಲಿ ಸೇರಿಸಿಲ್ಲ ಎಂದರೆ ಸರಿಯಲ್ಲ.

14. ಸರ್ವೆ ನಂ.100/2/2 ಮತ್ತು 100/2/5 ರ ಪೂರ್ವಕ್ಕೆ- ಹಣಮಂತ ಸತ್ತೆಪ್ಪ ಮಾವಿನಗಿಡದ ಇವರ ಜಮೀನು, ಪಶ್ಚಿಮಕ್ಕೆ- ಬೀರಪ್ಪ ಭೀಮಪ್ಪ ಮಾವಿನಗಿಡದ ಇವರ ಜಮೀನು, ಉತ್ತರಕ್ಕೆ- ಸರ್ವೆ ನಂ.99/2/3, ದಕ್ಷಿಣಕ್ಕೆ- ಹಳ್ಳ ಇರುತ್ತದೆ.ದಾವಾ ಆಸ್ತಿಗಳಲ್ಲಿ ನಾನು ಈ ಹೊತ್ತಿಗೂ ಸಹ ಕಬ್ಜೆಯಲ್ಲಿ ಇರದೇ ಇದ್ದರೂ ಕೂಡಾ ಕಬ್ಜೆಯಲ್ಲಿ ಇದ್ದೇನೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

15. ನಾನು ಈಗ 5-6 ವರ್ಷಗಳ ಹಿಂದೆ ವಿದೇಶಕ್ಕೆ ಹೋಗಿದ್ದೆ. ನಾನು ಖಾಯಂ ಆಗಿ ವಿದೇಶದಲ್ಲಿಯೇ ನೆಲಿಸಿದ್ದೇನೆ ಎಂದರೆ ಸರಿಯಲ್ಲ. ನಾನು ವಿದೇಶಕ್ಕೆ ಹೋಗುವುದಕ್ಕಿಂತ ಮೊದಲು ಸಾಫ್ಟವೇರ್ ಇಂಜಿನಿಯರ ಆಗಿ ಬೆಂಗಳೂರಿನಲ್ಲಿ ಕೆಲಸ ಮಾಡುತ್ತಿದ್ದೆ ಮತ್ತು ಊರಿಗೆ ಬಂದು ಹೊಲಗಳನ್ನು ನೋಡಿಕೊಳ್ಳುತ್ತಿದ್ದೆ. ನಾನು ನಮ್ಮ ಜಮೀನುಗಳನ್ನು ನೋಡಿಕೊಳ್ಳುತ್ತಿದ್ದೆ ಹಾಗೂ ಆ ಜಮೀನಿನಲ್ಲಿ ಒಕ್ಕಲುತನ ಮಾಡುತ್ತಿದ್ದೆ ಎಂದು ತೋರಿಸಲು ಯಾವುದೇ ದಾಖಲೆ ಇರುವುದಿಲ್ಲ.

ಓ.ಎಸ್. ನಂಃ 221/2016
ಪಿ.ಡಬ್ಲ್ಯೂ-1 (ಅಮರ)

16. ಏನಾದರು ಮಾಡಿ ದಾವಾ ಆಸ್ತಿಗಳನ್ನು ಪಡೆದುಕೊಳ್ಳಬೇಕು ಎನ್ನುವ ಉದ್ದೇಶದಿಂದ ಈ ಸುಳ್ಳುದಾವೆಯನ್ನು ಮಾಡಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಹಾಜರಪಡಿಸಿರುವ ದಾಖಲೆಗಳನ್ನು ಸಹ ಖೊಟ್ಟಿ ದಾಖಲೆಗಳಾಗಿರುತ್ತವೆ ಎಂದರೆ ಸರಿಯಲ್ಲ. ನಾನು, ನನ್ನ ತಂದೆ, ತಾಯಿ ಎಲ್ಲರೂ ಕೂಡಿ ಇದ್ದರೂ ಸಹ ನನ್ನ ಮತ್ತು ನನ್ನ ತಂದೆಯ ನಡುವೆ ಜಗಳ ಆಗಿ ನಾನು ಬೇರೆ ಇದ್ದೇನೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿಗಳ ತೆರಿಗೆ ಪಾವತಿ ಮಾಡಿದ ಬಗ್ಗೆ ತೆರಿಗೆ ಪಾವತಿ ರಸೀದಿಗಳನ್ನು ಹಾಜರ ಮಾಡಿಲ್ಲ.

**ಮರುವಿಚಾರಣೆಃ** ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆ ಪ್ರಕಾರ ಬೆರಳಚ್ಚು ಮಾಡಲಾಗಿದೆ)

ಓ ಹೇ ಕೇ ಸರಿ ಇದೆ.

(ಉಮೇಶ ಎಸ್. ಅತನೂರೆ)
ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು
ಗೋಕಾಕ.

ಸಾಕ್ಷಿಯ ಸಹಿ